ವಿಜಯವಾಣಿ
ಕನ್ನಡಿಗರ ಧ್ವನಿ

# ಎಸ್‌ಬಿಎಂ ಜೈನ್ ತಂಡಕ್ಕೆ ಜಯ

**ಬೆಂಗಳೂರು:** ಕೈಫ್ ಗಳಿಸಿದ 47 ಹಾಗೂ ಪರ್ವೆಜ್ ಗಳಿಸಿದ 13 ಅಂಕಗಳ ನೆರವಿನಿಂದ ಎಸ್‌ಬಿಎಂ ಜೈನ್ ತಂಡ ಪುರುಷರ ವಿಭಾಗದ ಐಎಂಜಿ ರಿಲಯನ್ಸ್ ಕಾಲೇಜು ಲೀಗ್‌ನಲ್ಲಿ ಸರ್. ಎಂವಿಐಟಿ ವಿರುದ್ಧ ಜಯ ಸಾಧಿಸಿತು. ಬುಧವಾರ ನಡೆದ ಪಂದ್ಯದಲ್ಲಿ ಎಸ್‌ಬಿಎಂ ಜೈನ್ ತಂಡ 102-40 ರಿಂದ ಸರ್. ಎಂವಿಐಟಿ ತಂಡವನ್ನು ಮಣಿಸಿತು. ದಿನದ ಮತ್ತೊಂದು ಪಂದ್ಯದಲ್ಲಿ ಸುರಾನ ಕಾಲೇಜು ತಂಡ 88-62 ರಿಂದ ಆರ್‌ವಿಸಿಇ ವಿರುದ್ಧ ಗೆಲುವು ದಾಖಲಿಸಿತು. ನ್ಯೂ ಹೊರೆಜಾನ್ ಕಾಲೇಜು ತಂಡ 60-31 ರಿಂದ ಪಿಇಎಸ್‌ಐಟಿ ವಿರುದ್ಧ ಜಯಿಸಿತು.